
ಮೈಗೂಡಿಸಿಕೊಂಡು, ಐದು ದಶಕಗಳ ಹಿಂದೆ ಮಹಾರಾಷ್ಟ್ರದಿಂದ ಕರ್ನಾಟಕ, ಆಂಧ್ರ, ತಮಿಳುನಾಡು, ಪಂಜಾಬ್, ಉತ್ತರ ಪ್ರದೇಶ ಹಾಗೂ ಇನ್ನು ಮುಂತಾದ ಪ್ರಾದೇಶಿಕ ಚಹರೆಗಳನ್ನು ಮೀರಿ ಸೆಕ್ಯುಲರ್ ಆಗಿ, ರಾಷ್ಟ್ರವ್ಯಾಪಿಯಾಗಿ ಬೆಳೆದಿದ್ದಲ್ಲದೆ, ಇಂದು ಜಾಗತಿಕವಾಗಿ ಬೃಹತ್ ಚಳವಳಿಯಾಗಿ ಬೆಳೆಯುತ್ತಿರುವ ಅಸ್ಪೃಶ್ಯ ಸಮುದಾಯಗಳ ಹೋರಾಟಕ್ಕೆ ಬಲವನ್ನು ತಂದುಕೊಟ್ಟಿರುವುದೇ ಈ ದಲಿತ ಐಡೆಂಟಿಟಿ. ಹಾಗಾಗಿ, ಅದನ್ನು ಅಷ್ಟು ಸುಲಭವಾಗಿ ತೊರೆಯಲಾಗದು. ಸದ್ಯಕ್ಕೆ ಅದರ ಅಗತ್ಯವೂ ಕಾಣಿಸುತ್ತಿಲ್ಲ ಎಂದು ವಾದಿಸಿದೆ. ಕರ್ನಾಟಕದ ಕೆಲ ದಲಿತ ಸಾಹಿತಿಗಳು, ಚಿಂತಕರು ಕೂಡ ದಲಿತ ಪದ ಬಳಕೆಯ ಬಗ್ಗೆ ತಕರಾರೆತ್ತಿದ್ದಾರಾದರೂ ಸಂವಾದಿ ಶಬ್ದ ಸೂಚಿಸಿದಂತಿಲ್ಲ.

ರಾಜರತ್ನ ಅಂಬೇಡ್ಕರ್ ಅವರ 'ದಲಿತ' ಐಡೆಂಟಿಟಿಗಿಂತ 'ಮೂಲನಿವಾಸಿಗಳು' ಅನ್ನುವ ಐಡೆಂಟಿಟಿಯೇ ಹೆಚ್ಚು ಸೂಕ್ತ ಅನ್ನುವ ವಾದ ಹೊಸತೇನಲ್ಲ. ಅಂಬೇಡ್ಕರರಿಗಿಂತ ವಯಸ್ಸಿನಲ್ಲಿ ನಾಲ್ಕೈದು ವರ್ಷಗಳಷ್ಟು ಹಿರಿಯರಾದ ಪಂಜಾಬಿನ ಚಮ್ಮಾರ ಕುಟುಂಬದ ಮಂಗೂರಾಮ್ ಮುಗೋವಾಲಿಯ 1925ರಲ್ಲಿ 'ಆದ್ ಧರ್ಮ' ಚಳವಳಿಯ ಮೂಲಕ ಪಂಜಾಬಿನ ಅಸ್ಪೃಶ್ಯರಿಗೆ ಮೂಲನಿವಾಸಿಯ ಸ್ಥಾನ ದೊರಕಿಸಲು ಹೋರಾಡಿ ದೊಡ್ಡ ಗೆಲುವನ್ನು ಸಾಧಿಸಿದವರು. ಗದರ್ ಪಾರ್ಟಿಯ ಸಂಸ್ಥಾಪನಾ ಸದಸ್ಯರಲ್ಲೊಬ್ಬರಾಗಿದ್ದ ಅವರು 1946ರಲ್ಲೇ ಪಂಜಾಬ್ ಶಾಸಕಾಂಗ ಸಭೆಗೆ ಆಯ್ಕೆಯಾಗಿದ್ದವರು. ಆದ್ ಧರ್ಮವನ್ನು ಪ್ರತ್ಯೇಕ ಮತವೆಂದು ಘೋಷಿಸಬೇಕೆಂಬ ಅವರ ಹೋರಾಟದ ಫಲವಾಗಿ 1931ರ ಸೆನ್ಸಸ್ ನಲ್ಲಿ ಐದು ಲಕ್ಷ ಮಂದಿ ಆದ್ ಧರ್ಮೀಯರೆಂದು ಘೋಷಿಸಿಕೊಂಡರು. ಅಷ್ಟು ಮಾತ್ರವಲ್ಲ, ಲಂಡನ್ ದುಂಡುಮೇಜಿನ ಪರಿಷತ್ತಿನಲ್ಲಿ ಡಿಪ್ರೆಸ್ಡ್ ಕ್ಲಾಸ್‌ಗಳಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಬೇಕೆನ್ನುವ ಅಂಬೇಡ್ಕರ್ ಹೋರಾಟಕ್ಕೆ ಅತಿದೊಡ್ಡ ಬೆಂಬಲ ನೀಡಿದವರು ಮಂಗೂವಾಲಿಯ. ಮಂಗೂವಾಲಿಯರ ಸಮಕಾಲೀನರಾದ ಸ್ವಾಮಿ ಅಚೂತಾನಂದ್ ತಮ್ಮ 'ಆದಿ ಹಿಂದೂ' ಚಳವಳಿ ಮೂಲಕ ಮೂಲನಿವಾಸಿ ವಾದವನ್ನು ಮುಂದುವರಿಸಿದಂತಹವರು. ಜಾಟವ್ ಚಮ್ಮಾರರರಾದ ಇವರು ಆರ್ಯ ಸಮಾಜದ ಸದಸ್ಯರಾಗಿದ್ದವರು. ಆರ್ಯರ ಜನಾಂಗ ಸಿದ್ಧಾಂತವನ್ನು ತಿರುಗಿಸಿ ಅಸ್ಪೃಶ್ಯರು ಮೂಲನಿವಾಸಿಗಳೆಂದು ವಾದಿಸಿ ಚಮ್ಮಾರ ಜಾತಿಗೆ ಅಂಟಿಕೊಂಡಿದ್ದ ಕಳಂಕವನ್ನು ಹೋಗಲಾಡಿಸಲು ಆದಿ ಹಿಂದೂ ಚಳವಳಿಯನ್ನು




ಕಲೆ: ಎ.ಎಂ. ಮಂಜುನಾಥ್